ಯಾಗುತ್ತದೆ ಕೊಡಸಳ್ಳಿ ಅಣೆಕಟ್ಟಿನ ಸ್ಥಳವನ್ನು ಬದಲಾಯಿಸಲು ಸರ್ಕಾರಕ್ಕೆ ಸ್ಥಳೀಯರು ಮನವಿ ಗಳನ್ನು ಸಲ್ಲಿಸಿದ್ದಾರೆ.

(ಇ) ಕೊಡಸಳ್ಳಿ ಅಣೆಕಟ್ಟಿಗೆ ಹಲವಾರು ಸ್ಥಳಗಳನ್ನು ಆಲೋಚಿಸಿ ಸದರಿ ಸ್ಥಳವನ್ನು ಅಸ್ತಿತ್ವಾರ ಲಭ್ಯ ನೀರಿನ ಸೂಕ್ತ ವಿದ್ಯುತ್ ಉತ್ಪಾದನೆ ದೃಷ್ಟಿಯಿಂದ ಅತ್ಯುತ್ತಮ ಸ್ಥಳವೆಂದು ಆರಿಸಲಾಗಿದೆ.

(ಈ) ಕ್ರಮಸಂಖ್ಯೆ (ಇ) ಯಲ್ಲಿ ಇದರ ಬಗ್ಗೆ ಉತ್ತರಿಸಿದೆ.

ಆಳಂದ ತಾಲೂಕಿನಲ್ಲಿ ಬಾವಿಗಳ ಮೂಲಕ ನೀರಾವರಿ

೧೬೪೫. ಬಿ. ಆರ್. ಪಾಟೀಲ್ (ಆಳಂದ).—ಸಣ್ಣ ನೀರಾವರಿ ರಾಜ್ಯ ಮಂತ್ರಿಗಳು ಈ ವಿಷಯ ಗಳನ್ನು ದಯವಿಟ್ಟು ತಿಳಿಸುವರೆ.—

(ಅ) ಗುಲ್ಬರ್ಗಾ ಜಿಲ್ಲೆಯ ಆಳಂದ ತಾಲ್ಲೂಕಿನಲ್ಲಿ ಬಾವಿಗಳ ಮೂಲಕ ನೀರಾವರಿ ಆಗುತ್ತಿರುವುದು ಸರಕಾರದವರ ಗಮನಕ್ಕೆ ಬಂದಿದೆಯೆ ;

(ಆ) ಹೆಚ್ಚುತ್ತಿರುವ ಮಳೆಯ ಅಭಾವದಿಂದ ಭೂಮಿಯಲ್ಲಿ ನೀರಿನ ಮಟ್ಟ ಕಡಿಮೆಯಾಗಿ ಬಾವಿಗಳು ಒಣಗುತ್ತಿರುವುದನ್ನು ತಡೆಗಟ್ಟಲು ಸರಕಾರದವರು ಕೈಕೊಂಡಿರುವ ಕ್ರಮಗಳೇನು ?

ರೈತರು ಮರವನ್ನು ಕಡಿಯಲು ಪರವಾನಿಗೆ ಕೊಡುವುದು

೧೬೪೬. ಶ್ರೀ ಬಾಕಿಲ ಹುಕ್ಕಪ್ಪ (ಸುಳ್ಯ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಶ್ರೀ ಅರಣ್ಯ ರಾಜ್ಯ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ ?

(ಅ) ರೈತರ ಸ್ವಂತ ಜಮೀನಿನಲ್ಲಿರುವ ಮರವನ್ನು ಅವರ ಸ್ವಂತಕ್ಕಾಗಿ ಉಪಯೋಗಿಸಿಕೊಳ್ಳಲು ಅರಣ್ಯ ವಲಯಾಧಿಕಾರಿಗಳಿಂದ ಪರವಾನಿಗೆ ಪಡೆದುಕೊಳ್ಳಲು ಮೂರು ಅಥವಾ ನಾಲ್ಕು ಸಲ ಹೋಗ ಬೇಕಾಗಬಹುದು. ಇದರಿಂದಾಗಿ ರೈತರಿಗೆ ತುಂಬಾ ತೊಂದರೆ ಯಾಗುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ?

(ಆ) ಹಾಗಿದ್ದಲ್ಲಿ ಸದರಿ ಪರವಾನಿಗೆಯನ್ನು ಪಂಚಾಯಿತಿಯ ಕರಣಿಕರು ಕೊಡುವಂತೆ ವ್ಯವಸ್ಥೆ ಮಾಡಲಾಗುವುದೆ ?

ಶ್ರೀ ಬಿ. ಎ. ಜೆ. ವಿಜಯ (ಅರಣ್ಯ ರಾಜ್ಯ ಮಂತ್ರಿಗಳು).—

(ಅ) ಇಲ್ಲ.

(ಆ) ಕರ್ನಾಟಕ ಅರಣ್ಯ ಅಧಿನಿಯಮ ೧೯೬೩ರ ಅನ್ವಯದ ಪ್ರಕಾರ ಕರಣಿಕರಿಗೆ ಈ ಅಧಿಕಾರ ನೀಡಲು ಬರುವುದಿಲ್ಲ.

ಕಿರುಳಿಯ ಎಂಬಲ್ಲಿರುವ ಸೇತುವೆಯ ಬಡಿಗಳಲ್ಲಿ ಮಣ್ಣು ಹಾಕಿ ವಾಹನ ಸಂಚಾರಕ್ಕೆ ಅನುಕೂಲ ಮಾಡಿಕೊಡುವ ಬಗ್ಗೆ

೧೬೪೭. ಶ್ರೀ ಬಾಕಿಲ ಹುಕ್ಕಪ್ಪ (ಸುಳ್ಯ).— ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಶ್ರೀ ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ ?

(ಅ) ಆರುತೋಡು ಎಂಬಲ್ಲಿರುವ ಮರ್ಕಂಟಿಗೆ ಹೋಗುವ ಲೋಕೋಪಯೋಗಿ ರಸ್ತೆಗೆ ಅಡ್ಡಲಾಗಿ ಕಿರುಳಿಯ ಎಂಬಲ್ಲಿ ಬರುವ ಹೊಳೆಗೆ ೧೯೮೩ನೇ ಇಸವಿಯಲ್ಲಿ ಒಂದು ಸೇತುವೆಯನ್ನು ನಿರ್ಮಿಸಿದ್ದು ಸದರಿ ಸೇತುವೆಯ ಎರಡೂ ಬದಿಗಳಲ್ಲಿ ಮಣ್ಣನ್ನು ಬಿಗಿ ವಾಹನ ಸಂಚಾರಕ್ಕೆ ಅನುಕೂಲ ಮಾಡಿಕೊಳ್ಳಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

(ಆ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದವರು ಕೈಕೊಂಡ ಕ್ರಮವೇನು ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

(ಅ) ಬಂದಿದೆ.

(ಆ) ಉಳಿದ ಕೆಲಸವನ್ನು ೧೯೮೪ನೇ ಮೇ ತಿಂಗಳ ಅಂತ್ಯದ ವೇಳೆಗೆ ಮುಗಿಸಲಾಗುವುದು.